


## ಇದು ಅಂಚೆ ಲಕೋಟೆಗಳ ಲೋಕ

# ಫಲ–ಪುಷ್ಪ ಕರ್ನಾಟಕ

ಅಂಚೆ ಲಕೋಟೆಗಳಲ್ಲಿ ಕರ್ನಾಟಕದ ಪ್ರಾದೇಶಿಕ ವಿಶೇಷಗಳು ಹಣ್ಣು–ಕಾಯಿಪಲ್ಲೆ–ಹೂವುಗಳ ರೂಪದಲ್ಲಿ ಅನಾವರಣಗೊಂಡಿವೆ. ಈ ಲಕೋಟೆಗಳು ನಾಡಿನ ಪ್ರಾದೇಶಿಕ ಅನನ್ಯತೆಯ ಕಥೆ ಹೇಳುವಂತಿವೆ.

■ ಎನ್‌. ಜಗನ್ನಾಥ ಪ್ರಕಾಶ್




ಹಣ್ಣು, ತರಕಾರಿ, ಹೂಗಳು ಒಂದು ನಾಡಿನ ಕಥೆ ಹೇಳಬಲ್ಲವೆ?

ಹೌದು, ಮರಗಿಡ ಬಳ್ಳಿಗಳಿಗೂ ಅವುಗಳ ಉತ್ಪನ್ನಗಳಿಗೂ ಒಂದು ಮಣ್ಣಿನ ಕಥೆ ಹೇಳುವ ಶಕ್ತಿಯಿದೆ. ಒಂದು ನೆಲದ ಕಥೆ ಮಾತ್ರವಲ್ಲ– ಈ ಪ್ರಾಕೃತಿಕ ಉತ್ಪನ್ನಗಳ ಚರಿತ್ರೆ ಕೆದಕುತ್ತಾ ಹೋದರೆ, ನಾಗರಿಕತೆಯ ಇತಿಹಾಸವೂ ತೆರೆದುಕೊಳ್ಳುತ್ತದೆ. ಆರಂಭದಲ್ಲಿ ಬೇಟೆಯ ಪ್ರಾಣಿಗಳ ಮಾಂಸ ಹಾಗೂ ಗೆಡ್ಡೆಗೆಣಸು ಹಣ್ಣುಗಳಿಂದ ಮನುಷ್ಯ ಹಸಿವು ತಣಿಸಿಕೊಳ್ಳುತ್ತಿದ್ದ. ನಂತರದ ಹಂತದಲ್ಲಿ ಕೃಷಿಯನ್ನು ಅವಲಂಬಿಸಿದ. ಈ ಕೃಷಿಗೆ ವಾಣಿಜ್ಯದ ಆಯಾಮ ಸೇರಿಕೊಂಡಾಗ ಫಲಪುಷ್ಪಗಳ ಕೃಷಿ ಆರಂಭವಾಯಿತು.

